ಅಸಲು ದಾವೆ ಸಂಖ್ಯೆ -168/2015
ಡಿ.ಡಬ್ಲ್ಯೂ - 02
ದಿನಾಂಕಃ 07-02-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ. ಎನ್ ಎನ್ ಪಿ ವಕೀಲರಿಂದ**

ಈ ದಾವೆಯಲ್ಲಿಹಾಜರುಪಡಿಸಿದ ವಿದ್ಯುತ ಬಿಲ್ಲುಗಳು ಮತ್ತು ಭಾವ ಚಿತ್ರಗಳು ನಿಡಿ-3 ರಿಂದ 9 ಮತ್ತು ನಿಡಿ- 11 ರಿಂದ 16 ಈ ದಾವೆಯ ದಾವಾ ಆಸ್ತಿಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ಸದರಿ ನಿಡಿ ಗಳು ಈ ದಾವಾ ಆಸ್ತಿಗೆ ಸಂಬಂಧಪಟ್ಟಿದ್ದು ಅಲ್ಲದೆ ಇದ್ದರು ಸಹ ಸಂಬಂಧಪಟ್ಟಿದೆಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಡಿ- 17 ಈ ದಾವಾ ಆಸ್ತಿಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ನಿಡಿ-17 ರಲ್ಲಿ ನೀಡಿದ ನೋಟಿಸ ಮುಂದೆ ಏನು ಆಯಿತು ಎಂದು ಹೇಳಲು ಆಗುತ್ತದೆಯಾ ಎಂದರೆ, ಹೇಳಲು ಆಗುವುದಿಲ್ಲ. ನೋಟಿಸ ನೀಡಿದ ದಾವೆಯಲ್ಲಿ ನೀವು ಹಾಜರಾಗಿರುವುದಿಲ್ಲ ಎಂದರೆ ಸರಿ.

ದೊಡ್ಡ ಲಾಡಸಾಬ್ ಮತ್ತು ಸಣ್ಣಲಾಡಸಾಬ್ ನಡುವೆ ಯವಾಗ ವಿಭಾಗ ಆಯಿತು ಎಂದರೆ ನಮ್ಮದು ಒಟ್ಟು ಕುಟುಂಬ ಇರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಒಟ್ಟ ಕುಟುಂಬದ ಆಸ್ತಿ ಎಷ್ಟು ಇದೆ ಎಂದರೆ ಒಟ್ಟು 16 ಎಕರೆ ಇದೆ. ಅದರಲ್ಲಿ ಮನೆ ಒಂದು ಮತ್ತು ನಾಲ್ಕು ಪ್ಲಾಟ್ ಇದೆ. ಈ ಎಲ್ಲಾ ಆಸ್ತಿಯು ದೊಡ್ಡ ಲಾಡಸಾಬ್ ಮತ್ತು ಸಣ್ಣ ಲಾಡಸಾಬ್ ರವರ ಹೆಸರಿನಲ್ಲಿಯೇ ಇದೆಯಾ ಎಂದರೆ ಮೊದಲು ಅವರ ಹೆಸರಿನಲ್ಲಿ ಇತ್ತು, ಈಗ ಎಲ್ಲಾ ಆಸ್ತಿಗಳು ಕುಟುಂಬದ ಹಿರಿಯನಾದ ಚಮನಸಾಬ ಪೀರಸಾಬ ನಧಾಪ ರವರ ಹೆಸರಿನಲ್ಲಿದೆ.

ನಾನು ಮೇಲೆ ಹೇಳಿದ ಒಟ್ಟು ಆಸ್ತಿಗಳು ಇಂದಿಗೂ ಸಹ ಚಮನಸಾಬ ನದಾಫ ರವರ ಹೆಸರಿನಲ್ಲಿ ಇದೆ ಎಂದು ತೋರಿಸಲು ಈಗ ಸಲ್ಲಿಸಿದ ದಾಖಲೆ ಬಿಟ್ಟು ಬೇರೆ ದಾಖಲೆಗಳು ಏನಾದರೂ ಇರುತ್ತದೆಯಾ ಎಂದರೆ ಸಾಕ್ಷಿಯು ಇರುವುದಿಲ್ಲ ಎಂದು ನುಡಿಯುತ್ತಾರೆ.

ದೊಡ್ಡಲಾಡಸಾಬ್ ರವರಿಗೆ ಪೀರಸಾಬ ಎಂಬ ಹೆಂಡತಿ, ಅವರಿಗೆ ಚಮನಸಾಬ, ಹಜರೇ ಸಾಬ ಮತ್ತು ಖಾದರಸಾಬ ಮಕ್ಕಳಿರುತ್ತಾರೆ ಎಂದರೆ ಸರಿ. ಚಮನಸಾಬ ರವರಿಗೆ ಶೈನಾಜ ಎಂಬ ಮಗಳು ಇದ್ದಾಳೆ ಎಂದರೆ ಸರಿ. ಹರಜೇಸಾಬಗೆ ಜುಬೇದಾ ಎಂಬ ಹೆಂಡತಿ ಇದ್ದಾಳೆ ಎಂದರೆ ಸರಿ.

ಸಣ್ಣಲಾಡಸಾಬ ರವರಿಗೆ ನಾಲ್ಕು ಜನ ಮಕ್ಕಳು ಎಂದರೆ ಸರಿ. ಅವರ ಹೆಸರು ಚಮನಸಾಬ, ಹಜರೇಸಾಬ, ಶಹಬುದ್ದೀನ ಮತ್ತು ಪೀರಸಾಬ ಎಂದರೆ ಸರಿ. ಹಜರೇಸಾಬಗೆ

ಶಹಜಹಾನ, ಜಹಾಂಗೀರಸಾಬ ಮತ್ತು ನೀವು ಮಕ್ಕಳು ಎಂದರೆ ಸರಿ. ಜಹಾಂಗೀರಸಾಬಗೆ ಪಿರಾಂಬಿ ಎಂಬ ಹೆಂಡತಿ ಇರುತ್ತಾರೆ ಎಂದರೆ ಸರಿ.

ದಾವಾ ಆಸ್ತಿ ಸಂಖ್ಯೆ 210 ಹಾಗೂ 210 ಎ ಪಂಚಾಯತ ಆಸ್ತಿ ನಂಬರ ಹೊರತಾಗಿ ದೊಡ್ಡಲಾಡಸಾಬ ಮತ್ತು ಸಣ್ಣಲಾಡಸಾಬ ರವರ ಹೆಸರಿನಲ್ಲಿ ದಾಖಲೆ ಇತ್ತು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

ದಿಃ 31-05-1984 ರಲ್ಲಿ ಫಕ್ಕೀರಯ್ಯ ಗದಿಗಯ್ಯ ಕಲ್ಮಠ ರವರಿಂದ ಚಮನಸಾಬ ತಂದೆ ಪೀರಸಾಬ ನದಾಫ ರವರು ದಾವಾ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ಸರಿ. ಈ ಆಸ್ತಿ ಖರೀದಿ ಮಾಡುವ ಸಮಯದಲ್ಲಿ ಸಣ್ಣ ಲಾಡಸಾಬನ ಮಕ್ಕಳು ಏನಾದರು ದುಡ್ಡು ಕೊಟ್ಟ ಬಗ್ಗೆ ಯಾವುದಾದರೂ ದಾಖಲೆ ಇದೆಯಾ ಎಂದರೆ ದಾಖಲೆ ಇರುವುದಿಲ್ಲ. ಚಮನಸಾಬ ತಂದೆ ಪೀರಸಾಬ ನದಾಫ ರವರೆ ಹಿರೇತನ ಮಾಡುತ್ತಿದ್ದರು. ಚಮನಸಾಬ ತಂದೆ ಪೀರಸಾಬ ನದಾಫ ರವರು 2 ಕುಟುಂಬದ ಅಂದರೆ ದೊಡ್ಡ ಲಾಡಸಾಬ ಮತ್ತು ಸಣ್ಣಲಾಡಸಾಬ ರವರ ಕುಟುಂಬದ ಹಿರೇತನ ಮಾಡುತ್ತಿದ್ದರು ಎಂದು ತೋರಿಸಲು ಯಾವುದಾದರೂ ದಾಖಲೆ ಇದೆಯಾ ಎಂದರೆ ಇರುವುದಿಲ್ಲ ಎಂದು ನುಡಿಯುತ್ತಾರೆ.

ದಾವಾದ ಆಸ್ತಿ ಖರೀದಿಯಾದಾಗಿನಿಂದಲೂ ಸಹ ಚಮನಸಾಬ ತಂದೆ ಪೀರಸಾಬ ನದಾಫ ರವರ ಹೆಸರಿನಲ್ಲಿ ನಂತರ ವಾದಿಯರ ಹೆಸರಿನಲ್ಲಿ ಇರುತ್ತೆದೆ ಎಂದರೆ ಸರಿ. ದಿಃ 18-12-2013 ರಂದು ಚಿಲ್ಝೂರ ಬಡ್ನಿ ಗ್ರಾಮ ಪಂಚಾಯತಿಯಲ್ಲಿ ಠರಾವು ಪಾಸಾಗಿ ದಾವಾ ಆಸ್ತಿಯು ಎರಡು ಹಿಸ್ಸೆಯಾಗಿ ವಾದಿಯ ಹೆಸರಿನಲ್ಲಿ ದಾಖಲಾಯಿತು ಎಂದರೆ, ಅವರ ಹೆಸರಿನಲ್ಲಿ ದಾಖಲಾಗಿದ್ದು ಸರಿ ಆದರೆ, ಅವರು ಮೋಸ ಮಾಡಿ ಅವರ ಹೆಸರನ್ನು ದಾಖಲು ಮಾಡಿರುತ್ತಾರೆ. ಮೋಸ ಆಗಿದೆ ಎಂದು ನಿಮಗೆ ಯಾವಾಗ ಗೊತ್ತಾಯಿತು ಎಂದರೆ 2013 ರಲ್ಲಿ ಗೊತ್ತಾಯಿತು. ಆದರೆ ಯಾವ ತಿಂಗಳು ಎಂದು ಹೇಳಲು ಆಗುವುದಿಲ್ಲ. ಮೋಸ ಮಾಡಿ ಪಡೆದುಕೊಂಡ ಠರಾವನ್ನು ಪ್ರಶ್ನಿಸಿ ಯಾವುದಾದರೂ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತೀರಾ ಎಂದರೆ ಸಲ್ಲಿಸಿರುವುದಿಲ್ಲ. ಸದರಿ ದಾವಾ ಆಸ್ತಿಯು ವಾದಿಗೆ ಸಂಬಂಧಪಟ್ಟಿದ್ದು, ನಮ್ಮ ಸಂಬಂಧಪಟ್ಟಿದ್ದಲ್ಲ ಎಂದು ತಿಳಿದಿದ್ದರಿಂದ ನೀವು ಯಾವುದೇ ತಕಾರಾರು, ದಾವೆ ಮತ್ತು ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

ಚಮನಸಾಬ ತಂದೆ ಪೀರಸಾಬ ನದಾಫ ರವರ ಮೇಲೆ ಯಾರಾದರೂ ಕ್ರಿಮೀನಲ್ ಪ್ರಕರಣಗಳನ್ನು ಹೂಡಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಚಮನಸಾಬ

ತಂದೆ ಪೀರಸಾಬ ನದಾಫ ಒಳ್ಳೆಯ ವ್ಯಕ್ತಿ ಎಂದರೆ ಸರಿಯಲ್ಲ. ಚಮನಸಾಬ ತಂದೆ ಪೀರಸಾಬ ನದಾಫ ರವರು ಚಿಲ್ಲೂರ ಬಡ್ನಿ ಗ್ರಾಮಪಂಚಾಯತಿಯಲ್ಲಿ ಚೇರಮೆನ್ ಮತ್ತು ಸದಸ್ಯನಾಗಿ 15 ವರ್ಷದ ಹಿಂದೆ 5 ವರ್ಷಗಳ ಕಾಲ ಇದ್ದನು.

ನಿಮ್ಮ ಪ್ರತಿವಾದಿ ಪತ್ರದಲ್ಲಿ ಮೌಖಿಕ ಕುಟುಂಬದ ವ್ಯವಸ್ಥೆಯ ಬಗ್ಗೆ ಯಾವುದಾದರೂ ದಾಖಲೆ ಇದೆಯಾ ಎಂದರೆ ಇರುವುದಿಲ್ಲ. ನಿಡಿ- 20 ರಲ್ಲಿ ಆದ ಕುಟುಂಬದ ವ್ಯವಸ್ಥೆಯ ಪ್ರಕಾರ ಅದರಲ್ಲಿ ನೀನು ಹೇಳಿದ ಮೌಖಿಕ ಕುಟುಂಬದ ವ್ಯವಸ್ಥೆಯ ಬಗ್ಗೆ ಉಲ್ಲೇಖ ಇದೆಯಾ ಎಂದರೆ ಸಾಕ್ಷಿಗೆ ದಾಖಲೆಯನ್ನು ತೋರಿಸಿದ್ದು ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಮುಂದುವರೆದು ಉಲ್ಲೇಖ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿನಗೆ ಓದಲು ಬರದೆ ಇರುವುದರಿಂದ ನಿಡಿ- 20 ರಲ್ಲಿ ಬರೆದಿರುವ ಮಾಹಿತಿ ಮತ್ತು ಯಾರು ಯಾರು ಸಹಿ ಮಾಡಿದ್ದಾರೆ ಎಂಬ ಮಾಹಿತಿ ನಿಮಗೆ ಗೊತ್ತಿಲ್ಲ ಎಂದರೆ ಸರಿ.

ನಿಡಿ- 18 ಮತ್ತು 19 ರಲ್ಲಿ ಏನು ಬರೆದಿದ್ದಾರೆ ಎಂದು ಹೇಳಲು ಆಗುತ್ತದೆ ಎಂದರೆ ಆಗುವುದಿಲ್ಲ, ಅದರಲ್ಲಿ ಚಮನಸಾಬ ತಂದೆ ಪೀರಸಾಬ ನದಾಫ ರವರೆ ಎಲ್ಲವನ್ನು ಬರೆಯಿಸಿರುತ್ತಾರೆ. ಆ ವೇಳೆಯಲ್ಲಿ ನಾನು ಮತ್ತು ನನ್ನ ಅಣ್ಣ 1 ನೇ ಪ್ರತಿವಾದಿಯು ಹಾಜರಿದ್ದೇವು. ಅದರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆದರೆ ಚಮನಸಾಬ ತಂದೆ ಪೀರಸಾಬ ನದಾಫ ರವರು ದಾವಾ ಆಸ್ತಿಯನ್ನು ನಿಮಗೆ ಬಿಟ್ಟು ಕೊಡುತ್ತೇನೆ ಎಂದು ಹೇಳಿರುತ್ತಾರೆ. ಚಮನಸಾಬ ತಂದೆ ಪೀರಸಾಬ ನದಾಫ ರವರು ಹಕ್ಕುಬಿಟ್ಟ ಪತ್ರ ಎಂದು ಹೇಳಿ ಬಾಂಡನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನಿಡಿ- 18 ಮತ್ತು 19 ರನ್ನು ಯಾವ ಉದ್ದೇಶಕ್ಕಾಗಿ ಖರ್ಚು ಹಾಕಿಸಲಾಗಿದೆ ಎಂದು ನೀನು ವಕೀಲರ ಮುಖಾಂತರ ಏನಾದರೂ ತಿಳಿದುಕೊಂಡಿದ್ದಿಯಾ ಎಂದರೆ ತಿಳಿದುಕೊಂಡಿರುವುದಿಲ್ಲ.

ನೀವುಗಳು ಸಾಕ್ಷಿಧಾರರ ಜೊತೆ ಮಿಲಾಪಿಯಾಗಿ ನಿಡಿ- 18 ರಿಂದ 20 ನ್ನು ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಚಮನಸಾಬ ತಂದೆ ಪೀರಸಾಬ ನದಾಫ ರವರ ಸಹಿಯನ್ನು ನಿಡಿ- 18 ರಿಂದ 20 ರಲ್ಲಿ ನಕಲು (Forgery) ಮಾಡಿರುತ್ತೀರಿ ಎಂದರೆ ಸರಿಯಲ್ಲ. ಚಮನಸಾಬ ತಂದೆ ಪೀರಸಾಬ ನದಾಫ ರವರಿಗೆ ಶಹಜಾನ ತಂದೆ ಹಜರೇಸಾಬ ನದಾಫ ರವರು ಖಾಸಾ ಅಣ್ಣ ತಮ್ಮಂದಿರು ಅಲ್ಲ ಎಂದರೆ ಸರಿ. ನಿಡಿ- 20 ರಲ್ಲಿ ಶಹಜಾನ ರವರಿಗೆ ಕಬ್ಜಾ ಕೊಟ್ಟ ಬಗ್ಗೆ ಉಲ್ಲೇಖ ಇರುವುದಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ನಿಡಿ- 18 ಮತ್ತು 19 ರಲ್ಲಿ ಖಬ್ಜಾ ಕೊಟ್ಟ ಬಗ್ಗೆ ಉಲ್ಲೇಖ ಇದೆಯಾ ಎಂದರೆ ಕಬ್ಜಾವನ್ನು ನಮಗೆ ಕೊಟ್ಟಿದ್ದೇವೆ ಎಂದು ಪಿರಾಂಬಿ ಮತ್ತು ಕಬೀರಸಾಬ ರವರಿಗೆ ಎಂದು ಬರೆಸಿರುತ್ತಾರೆ. ದಿನಾಂಕಃ

24-03-2012 ರ ವರೆಗೆ ದಾವಾ ಆಸ್ತಿಯಲ್ಲಿ ಯಾರು ಕಬ್ಜಾ ಇದ್ದರು ಎಂದರೆ ನಾವೇ ಇದ್ದೇವು. 2012 ರಲ್ಲಿ ನೀವೆ ಕಬ್ಜಾ ಇದ್ದೇವು ಎಂದು ಸುಳ್ಳು ನುಡಿಯುತ್ತಿದ್ದೀಯಾ ಎಂದರೆ ಸರಿಯಲ್ಲ. ದಿಃ 21-07-2000 ರಿಂದ ಇಲ್ಲಿಯ ತನಕ ದಾವಾ ಆಸ್ತಿಯಲ್ಲಿ ನಾವೇ ಕಬ್ಜೆಯಲ್ಲಿ ಇರುತ್ತೇವೆ. ಅದಕ್ಕಿಂತ ಮೊದಲು ನಮ್ಮ ಅಜ್ಜನವರಾದ ದೊಡ್ಡಲಾಡಸಾಬ ಮತ್ತು ಸಣ್ಣಲಾಡಸಾಬ ನವರು ಕಬ್ಜೆಯಲ್ಲಿ ಇದ್ದರು.

ದೊಡ್ಡಲಾಡಸಾಬ ಮತ್ತು ಸಣ್ಣಲಾಡಸಾಬ ರವರು ಯಾವಾಗ ಮರಣ ಹೊಂದಿರುತ್ತಾರೆ ಎಂದರೆ ದಿನಾಂಕ ಗೊತ್ತಿಲ್ಲ. ನಾನು ಸಣ್ಣವನಿದ್ದಾಗ ಮರಣ ಹೊಂದಿರುತ್ತಾರೆ. ಅವರ ಮರಣ ಉತಾರ ಇದೆಯಾ ಎಂದರೆ, ಇರಬಹುದು, ಹಾಜರುಪಡಿಸುತ್ತೀಯಾ ಎಂದರೆ ನೋಡಬೇಕು ಎಂದು ನುಡಿಯುತ್ತಾರೆ. ಮರಣ ಪತ್ರ, ಜನನ ಪತ್ರಗಳು ಗ್ರಾಮ ಪಂಚಾಯತಿಯಲ್ಲಿ, ಪುರಸಭೆ ಕಾರ್ಯಾಲಯದಲ್ಲಿ ಸಿಗುತ್ತವೆ ಎಂದರೆ ಸರಿ. ದೊಡ್ಡಲಾಡಸಾಬ ಮತ್ತು ಸಣ್ಣಲಾಡಸಾಬ ರವರ ಮರಣ ಪತ್ರಗಳನ್ನು ಹಾಜರುಪಡಿಸಲು ನಿಮಗೆ ತೊಂದರೆ ಇಲ್ಲ ಎಂದರೆ ಸರಿ.

ದೊಡ್ಡಲಾಡಸಾಬ ಮತ್ತು ಸಣ್ಣಲಾಡಸಾಬ ರವರು ಎಂದಿಗೂ ಸಹ ದಾವಾ ಆಸ್ತಿಯುಲ್ಲಿ ಕಬ್ಜಾ ಇರಲಿಲ್ಲ, ಸದರಿ ದಾವಾ ಆಸ್ತಿಯು ಚಮನ ಸಾಬ ತಂದೆ ಪೀರಸಾಬ ನದಾಫ ರವರು ಖರೀದಿಸಿದ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ನಿಡಿ- 18 ರಲ್ಲಿ ಚಮನಸಾಬ ರವರು ನಿಮಗೆ ಯಾವ ಭಾಗದ ಆಸ್ತಿಯನ್ನು ಬಿಟ್ಟು ಕೊಟ್ಟಿದ್ದಾರೆ ಎಂದು ಬರೆದಿಲ್ಲ ಎಂದರೆ, ಬರೆದುಕೊಟ್ಟಿರುತ್ತಾರೆ. ಯಾವ ಭಾಗದ ಆಸ್ತಿಯನ್ನು ಬಿಟ್ಟು ಕೊಟ್ಟಿದ್ದೇನೆ ಎಂದು ಬರೆಯದೆ ಇದ್ದರು ಸಹ ಬರೆದಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

ನಿಡಿ- 18 ರಿಂದ 20 ಆಧಾರದ ಮೇಲೆ ನಿಮ್ಮ ಹೆಸರುಗಳನ್ನು ಪಂಚಾಯತಿಯಲ್ಲಿ ನಮೂದಿಸಲು ಏನಾದರೂ ಪ್ರಯತ್ನ ಪಟ್ಟಿರುತ್ತೀರಾ ಎಂದರೆ ಪ್ರಯತ್ನ ಪಟ್ಟಿರುತ್ತೇವೆ. ಸದರಿ ವಿಷಯವಾಗಿ ಅರ್ಜಿಯನ್ನು ಏನಾದರೂ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಡಿ- 18 ರಿಂದ 20 ನೀವುಗಳು ಸೃಷ್ಠಿ ಮಾಡಿಕೊಂಡಿದ್ದರಿಂದ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು 2013 ನೇ ಇಸವಿಯಲ್ಲಿ ಚಮನಸಾಬ ತಂದೆ ಪೀರಸಾಬ ನದಾಫ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ.

ಚಮನಸಾಬ ತಾನೇ ಮಾಲೀಕನಾಗಿದ್ದರಿಂದ ದಾಖಲಾತಿಗಳ ಪ್ರಕಾರ ತನ್ನ ಹೆಂಡತಿ ಮತ್ತು ಮಗಳಿಗೆ ಆಸ್ತಿಯನ್ನು ಬಿಟ್ಟು ಕೊಟ್ಟಿರುತ್ತಾನೆ ಎಂದರೆ ಸರಿ. ಮುಂದುವರೆದು ಚಮನಸಾಬನು ನಮಗೆ ಮೋಸ ಮಾಡಿರುತ್ತಾನೆ. ದಾವಾ ಆಸ್ತಿಯಲ್ಲಿ ಚಮನಸಾಬ ಮೊದಲು

ನಂತರ ವಾದಿಗಳು ಕಬ್ಜಾದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನಿಡಿ- 18 ರಿಂದ 20 ನ್ನು ನೀವುಗಳು ಸೃಷ್ಠಿಮಾಡಿಕೊಂಡು ವಾದಿಯರಿಗೆ ಹರಕತ್ತು ಮಾಡಿದ್ದರಿಂದ ವಾದಿಯರು ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯರೆ ಕಬ್ಜಾದಲ್ಲಿ ಇದ್ದರೂ ಸಹ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.